## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 607(772) |
| ಉತ್ತರಿಸಬೇಕಾದ ದಿನಾಂಕ | : | 21.02.2024 |
| ಸದಸ್ಯರ ಹೆಸರು | : | ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಮಾನ್ಯ ಕಂದಾಯ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ದುರ್ಬಲರು, ಅಸಹಾಯಕರು, ಬಡತನ ರೇಖೆಗಿಂತ ಕೆಳಗಿನವರಿಗೆ ಜೀವನ ನಿರ್ವಹಣೆಗೆ ಅನುಕೂಲವಾಗಲಿ ಎಂದು ಸಾಮಾಜಿಕ ಭದ್ರತಾ ಯೋಜನೆಯಲ್ಲಿ ಪಿಂಚಣಿ ನೀಡಲು ರೂಪಿಸಿರುವ ಯೋಜನೆಗಳ ಮಾಹಿತಿ ನೀಡುವಿರಾ; ಯೋಜನೆಗಳಲ್ಲಿ ಫಲಾನುಭವಿಯಾಗಲು ರೂಪಿಸಿರುವ ನಿಯಮಗಳೇನು;</td><td>ಕಂದಾಯ ಇಲಾಖೆಯ ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯದಡಿ ಈ ಕೆಳಕಂಡ ಪಿಂಚಣಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ.
<table>
<tr><th>ಕ್ರಸಂ.</th><th>ಯೋಜನೆ</th></tr>
<tr><td>1.</td><td>ವೃದ್ಧಾಪ್ಯ ವೇತನ</td></tr>
<tr><td>2.</td><td>ವಿಧವಾ ವೇತನ</td></tr>
<tr><td>3.</td><td>ಅಂಗವಿಕಲ ವೇತನ</td></tr>
<tr><td>4.</td><td>ಸಂಧ್ಯಾ ಸುರಕ್ಷಾ ಯೋಜನೆ</td></tr>
<tr><td>5.</td><td>ಮನಸ್ವಿನಿ ಯೋಜನೆ</td></tr>
<tr><td>6.</td><td>ಮೈತ್ರಿ ಯೋಜನೆ</td></tr>
<tr><td>7.</td><td>ಸಾಲಭಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತನ ಪತ್ನಿಗೆ ವಿಧವಾ ವೇತನ</td></tr>
<tr><td>8.</td><td>ಆಸಿಡ್‌ದಾಳಿಗೆ ಒಳಗಾದ ಮಹಿಳೆಯರಿಗೆ ಪಿಂಚಣಿ ಯೋಜನೆ</td></tr>
<tr><td>9.</td><td>ಎಂಡೋಸಲ್ಫಾನ್ ಸಂತ್ರಸ್ಥರಿಗೆ ಮಿತ ವೇತನ</td></tr>
</table>
ಸದರಿ ಯೋಜನೆಗಳಲ್ಲಿ ಫಲಾನುಭವಿಯಾಗಲು ಇರುವ ಮಾನದಂಡಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.</td></tr>
<tr><td>ಆ)</td><td>ಸಾಮಾಜಿಕ ಭದ್ರತಾ ಯೋಜನೆಯಲ್ಲಿ ಪಿಂಚಣಿ ನೀಡುವ ಯಾವುದಾದರೂ ಯೋಜನೆಗಳನ್ನು 2023-24ನೇ ಸಾಲಿನಲ್ಲಿ ನಿಲ್ಲಿಸಲಾಗಿದೆಯೇ; ನಿಲ್ಲಿಸಿದ್ದಲ್ಲಿ, ಕಾರಣಗಳನ್ನು ನೀಡುವುದು; ಯಾವುದಾದರೂ ಯೋಜನೆಗಳನ್ನು ಸೇರಿಸಲಾಗಿದೆಯೇ; (2023-24 ಮತ್ತು 2022-23 ರಲ್ಲಿ ಜಾರಿ ಇರುವ ಮತ್ತು ನಿಲ್ಲಿಸಿರುವ ಯೋಜನೆಗಳ ವಿವರಗಳನ್ನು ಪ್ರತ್ಯೇಕವಾಗಿ ನೀಡುವುದು.</td><td>ಸಾಮಾಜಿಕ ಭದ್ರತಾ ಯೋಜನೆಗಳ ಪೈಕಿ 2023-24ನೇ ಸಾಲಿನಲ್ಲಿ ಯಾವುದೇ ಪಿಂಚಣಿ ಯೋಜನೆಗಳನ್ನು ನಿಲ್ಲಿಸಿರುವುದಿಲ್ಲ.<br><br>2022-23ನೇ ಸಾಲಿನಲ್ಲಿ ವಿವಿಧ ಇಲಾಖೆಗಳಿಂದ ನಿರ್ದೇಶನಾಲಯಕ್ಕೆ ವರ್ಗಾವಣೆಗೊಂಡಿರುವ ಹಾಗೂ ಜಾರಿಯಲ್ಲಿರುವ ಯೋಜನೆಗಳ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.</td></tr>
<tr><td>ಇ)</td><td>ಬಿ.ಪಿ.ಎಲ್ ಕಾರ್ಡ್‌ಗೆ ರೂ.1.20 ಲಕ್ಷ ಆದಾಯ ಮಿತಿ ಇದ್ದು, ಆದರೆ ಸಂಧ್ಯಾ ಸುರಕ್ಷಾ ಮತ್ತು ವಿಧವಾ ವೇತನ ಪಿಂಚಣಿಗೆ ಅರ್ಹತೆ ಹೊಂದಲು ರೂ.32 ಸಾವಿರ ಆದಾಯ ಮಿತಿ ನಿಗದಿಪಡಿಸಿರುವುದು ಸರಿಯೇ; ಯಾವ ಮಾನದಂಡಗಳ ಆಧಾರದ ಮೇಲೆ ಆದಾಯ ಮಿತಿಯನು ನಿಗದಿಪಡಿಸಲಾಗಿದೆ; ಇದೊಂದು ಅವೈಜ್ಞಾನಿಕ ನಿಯಮದಂತೆ ಆಗುವುದಿಲ್ಲವೇ;</td><td>ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳಡಿ 2011 ರಲ್ಲಿ ಆದಾಯ ಮಿತಿಯನು ಪರಿಷ್ಕರಿಸಿದ್ದು, ಕಳೆದ ಹತ್ತು ವರ್ಷಗಳಲ್ಲಿನ ಆರ್ಥಿಕ ಬೆಳವಣಿಗೆಯನ್ನು ಪರಿಗಣಿಸಿ, ವಿವಿಧ ಯೋಜನೆಗಳಡಿ ಈಗಾಗಲೇ ಅರ್ಹರೆಂದು ಗುರುತಿಸಲ್ಪಟ್ಟು ಹಿಂದಿನ ವರ್ಷಗಳಲ್ಲಿ ಮಂಜೂರಾತಿ ನೀಡಲಾಗಿರುವ ಫಲಾನುಭವಿಗಳ ಆರ್ಥಿಕ ಸ್ಥಿತಿ ಸುಧಾರಣೆಯಾಗಿದ್ದು, ಪ್ರಸಕ್ತ ಆದಾಯ ಮಿತಿಯನ್ನೆ ಗಣನೆಗೆ ತೆಗೆದುಕೊಂಡಲ್ಲಿ, ವಾರ್ಷಿಕ ಪರಿಶೀಲನೆ</td></tr>
</table>

| | | |
|---|---|---|
| ಈ) | ಬಿ.ಪಿ.ಎಲ್ ಕಾರ್ಡ್ ಆದಾಯಕಿಂತ ಅತ್ಯಂತ ಕಡಿಮೆ ಆದಾಯ ನಿಗದಿಪಡಿಸಿರುವುದು ಸಂಧ್ಯಾಕಾಲದಲ್ಲಿ ಪಿಂಚಣಿಯ ಆಸರೆ ಬಯಸುವ ವೃದ್ಧರಿಗೆ/ ವಿಧವೆಯರಿಗೆ ಯೋಜನೆಗಳ ನಿಯಮಗಳು ಮಾರಕವಾದಂತೆ ಆಗುವುದಿಲ್ಲವೇ; ಇದರಿಂದ ಅರ್ಹ ಫಲಾನುಭವಿಗಳಿಗೆ ಸೌಲಭ್ಯ ಪಡೆಯಲು ತೊಂದರೆಯಾಗುವುದಿಲ್ಲವೇ? (ಮಾಹಿತಿನೀಡುವುದು) | ಸಂದರ್ಭದಲ್ಲಿ ಅನರ್ಹರಾಗುವ ಸಂಭವವನ್ನು ಗಂಭೀರವಾಗಿ ಪರಿಗಣಿಸಿ ಹಾಗೂ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಆದಾಯ ಮಿತಿಯನ್ನು ಹೆಚ್ಚಿಸುವುದರಿಂದ ನೈಜ ಹಾಗೂ ವಸ್ತುನಿಷ್ಠ ಸ್ವರೂಪವನ್ನಾಗಿಸಬಹುದಾಗಿರುವ ವಿಷಯವನ್ನು ಗಮನಿಸಿ ಈಗಾಗಲೇ ನಿಗದಿಪಡಿಸಿರುವ ವಾರ್ಷಿಕ ಆದಾಯ ಮಿತಿಯನ್ನು ಗ್ರಾಮೀಣ ಪ್ರದೇಶದಲ್ಲಿ ರೂ 12,000/- ಹಾಗೂ ನಗರ ಪ್ರದೇಶದಲ್ಲಿ ರೂ 17,000/-ಗಳ ಬದಲಾಗಿ ಏಕೀಕೃತವಾಗಿ ಆದಾಯ ಮಿತಿಯನ್ನು ರೂ 32,000/- ಗಳಿಗೆ ನಿಗಧಿಪಡಿಸಿ, ಸಂಖ್ಯೆ: ಡಿ.ಎಸ್.ಎಸ್.ಪಿ/ ಮಿಸಲೇನಿಯಸ್/05/2020 ದಿನಾಂಕ: 10.02.2021 ರಲ್ಲಿ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ. ಸದರಿ ಆದೇಶ ಮಾರ್ಚ್ 2021 ರಿಂದ ಜಾರಿಗೆ ಬಂದಿರುತ್ತದೆ.<br><br>ಮೂಲಭೂತ ಸೌಕರ್ಯಗಳನ್ನು ಒದಗಿಸುವ ದೃಷ್ಟಿಯಿಂದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಕ್ಕೆ ರೂ.1.20 ಲಕ್ಷ ವಾರ್ಷಿಕ ಆದಾಯ ನಿಗದಿಪಡಿಸಲಾಗಿದೆ. ಬಿ.ಪಿ.ಎಲ್ ಕುಟುಂಬಗಳಿಗೆ ಸರ್ಕಾರದಿಂದ ಉಚಿತವಾಗಿ ಪಡಿತರ, ಆರೋಗ್ಯ, ಶಿಕ್ಷಣ ಮುಂತಾದ ಸೌಲಭ್ಯಗಳನ್ನು ಒದಗಿಸುತ್ತಿರುವ ಹಿನ್ನೆಲೆಯಲ್ಲಿ ಆರ್ಥಿಕವಾಗಿ ಹಿಂದುಳಿದ ಕುಟುಂಬದಲ್ಲಿನ ಅಸಹಾಯಕ ವ್ಯಕ್ತಿಗಳಿಗೆ ಜೀವನ ನಿರ್ವಹಣೆಗಾಗಿ ಆರ್ಥಿಕ ನೆರವು ನೀಡುವ ಹಿನ್ನೆಲೆಯಲ್ಲಿ ಸಾಮಾಜಿಕ ಭದ್ರತೆ ಪಿಂಚಣಿ ಯೋಜನೆಗಳನ್ನು ಜಾರಿಗೊಳಿಸಿರುವುದರಿಂದ ಕುಟುಂಬದ ವಾರ್ಷಿಕ ಆದಾಯ ಮಿತಿಯನ್ನು ರೂ.32000/-ಗಳಿಗೆ ನಿಗದಿಪಡಿಸಲಾಗಿದೆ..<br>ಕೋವಿಡ್ ನಿಂದ ಮೃತಪಟ್ಟ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಅವಲಂಭಿತರಿಗೆ ರೂ.204 ಲಕ್ಷಗಳ ಪರಿಹಾರ ಧನವನ್ನು ಮಂಡಳಿಯ ವತಿಯಿಂದ ನೀಡುವುದಾಗಿ ದಿನಾಂಕ:17.09.2021ರಂದು ಆದೇಶ ಹೊರಡಿಸಲಾಗಿದೆ. |

**ಕಡತ ಸಂಖ್ಯೆ:ಆರ್‌ಡಿ 33 ಕಂಟಿ ಎಸ್‌ಎಸ್‌ಪಿ 2024**

( ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಛಲವಾದಿ.ಟಿ.ನಾರಾಯಣಸ್ವಾಮಿ(ವಿಧಾನಸಭೆಯಿಂದ ಚುನಾಯಿತರಾದವರು)ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:607(772)ಕ್ಕೆ ಅನುಬಂಧ-1**

| ಕ್ರ.ಸಂ | ಯೋಜನೆ/ಕಾರ್ಯಕ್ರಮದ ಹೆಸರು | ಯೋಜನೆ ಉದ್ದೇಶ | ಯೋಜನೆ ಸೌಲಭ್ಯ ಪಡೆಯಲು ಫಲಾನುಭವಿಗಳಿಗೆ ಇರಬೇಕಾದ ಅರ್ಹತೆ |
|---|---|---|---|
| 1. | ವೃದ್ಧಾಪ್ಯ ವೇತನ<br>ವಯಸ್ಸು 60 ರಿಂದ 64 ವರ್ಷ<br>65 ವರ್ಷ ಮೇಲ್ಪಟ್ಟು | ಬಡತನ ರೇಖೆಗಿಂತ ಕೆಳಗಿರುವ ಸಂಕಷ್ಟದಲ್ಲಿರುವ ಹಿರಿಯ ನಾಗರೀಕರಿಗೆ ನರವು ನೀಡಿ ಸಮಾಜದ ಮುಖ್ಯವಾಹಿನಿಗೆ ತರುವುದು. | • 60 ವರ್ಷ ಮೇಲ್ಪಟ್ಟ ಹಿರಿಯ ನಾಗರೀಕರು<br>• ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ. 32,000/- |

| | | | |
|---|---|---|---|
| | | | ಗಳಿಗಿಂತ ಕಡಿಮೆ ಇರುಬೇಕು. |
| 2 | ವಿಧವಾ ವೇತನ | ನಿರ್ಗತಿಕ ವಿಧವೆಯರಿಗೆ ಆರ್ಥಿಕ ಸಹಾಯ ಒದಗಿಸುವುದು | • 18 ವರ್ಷ ಮೇಲ್ಪಟ್ಟ ವಿಧವೆಯರು<br>• ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ 32,000/- ಗಳಿಗಿಂತ ಕಡಿಮೆ ಇರಬೇಕು. |
| 3. | ಅಂಗವಿಕಲ ವೇತನ<br>ಶೇ. 40 ಅಂಗವಿಕಲತೆ ಹೊಂದಿರುವವರು<br>ಶೇ.75ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವವರು | ಬಡತನ ರೇಖೆಗಿಂತ ಕೆಳಗಿರುವ ಅಂಗವಿಕಲರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಆರ್ಥಿಕ ಭದ್ರತೆ ಒದಗಿಸುವುದು | • ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ.32,000/- ಗಳಿಗಿಂತ ಕಡಿಮೆ ಇರುಬೇಕು.<br>• ಅಂಗವಿಕಲತೆ ಪ್ರಮಾಣ ಶೇ.40 ಕ್ಕಿಂತ ಹೆಚ್ಚಿರುಬೇಕು |
| 4 | ಸಂಧ್ಯಾ ಸುರಕ್ಷಾ ವೇತನ | 65 ವರ್ಷ ಮೇಲ್ಪಟ್ಟ ವಯಸ್ಸಿನ ಹಿರಿಯ ನಾಗರೀಕರನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡುವ ಹಾಗೂ ಸಮಾಜದ ಮುಖ್ಯವಾಹಿನಿಗೆ ತರುವುದು | • ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ.32,000/- ಗಳಿಗಿಂತ ಕಡಿಮೆ ಇರಬೇಕು.<br>• 65 ವರ್ಷ ಮೇಲ್ಪಟ್ಟ ವಯಸ್ಸಿನ ಹಿರಿಯ ನಾಗರೀಕರಿಗೆ. |
| 5. | ಮನಸ್ವಿನಿ ಯೋಜನೆ | ಅವಿವಾಹಿತ/ವಿಚ್ಛೇದಿತ/ಪರಿತ್ಯಕ್ತ ಮಹಿಳೆಯರಿಗೆ ಆರ್ಥಿಕ ಸಹಾಯವನ್ನು ಒದಗಿಸಿ ಸಮಾಜದ ಮುಖ್ಯವಾಹಿನಿಗೆ ತರುವುದು | • 40 ರಿಂ 64 ವರ್ಷ ವಯಸ್ಸಿನೊಳಗಿನ ಅವಿವಾಹಿತ ಮಹಿಳೆಯರು<br>• ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ 32,000/- ಗಳಿಗಿಂತ ಕಡಿಮೆ ಇರಬೇಕು |
| 6. | ಮೈತ್ರಿಯೋಜನೆ | ಲಿಂಗತ್ವ ಅಲ್ಪಸಂಖ್ಯಾತರಿಗೆ ಆರ್ಥಿಕ ಸಹಾಯವನ್ನು ಒದಗಿಸಿ ಸಮಾಜದ ಮುಖ್ಯವಾಹಿನಿಗೆ ತರುವುದು | • 25 ರಿಂದ 64 ವರ್ಷ ವಯಸ್ಸಿನೊಳಗಿನ ಲಿಂಗತ್ವಅಲ್ಪ ಸಂಖ್ಯಾತರು<br>• ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ. 32,000/- ಗಳಿಗಿಂತ ಕಡಿಮೆ ಇರಬೇಕು. |
| 7. | ಸಾಲ ಭಾದೆಯಿಂದ ಆತ್ಮಹತ್ಯೆ ಮಾಡಿಕೊಂಡರೈತ ಪತ್ನಿಯರಿಗೆ ವಿಧವಾ ಮಾಸಾಶನ | ಸಾಲಭಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳ ಹಿತಾಸಕ್ತಿ ಕಾಪಾಡುವುದು | • ಸಾಲಭಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ಮೃತರೈತನ ಪತ್ನಿಯಾಗಿದ್ದು, ಕೃಷಿ ಇಲಾಖೆಯಿಂದ ರೈತರ ಆತ್ಮಹತ್ಯೆ ಪಡೆದುಕೊಂಡಿರುವವರಿಗೆ |
| 8. | ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ಸಹಾಯಧನ | ಆಸಿಡ್ ದಾಳಿಗೆ ಒಳಗಾದ ಎಲ್ಲಾ ಮಹಿಳೆಯರಿಗೆ ಜೀವನ ನಿರ್ವಹಣೆಗೆ ಅನುಕೂಲ ಮಾಡಿಕೊಡುವ ಹಾಗೂ ಸಮಾಜದಲ್ಲಿ ಗೌರವಪೂರ್ವಕವಾಗಿ ಬದುಕಲು ಅವಕಾಶ ಕಲ್ಪಿಸುವುದು | • ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆಯಿಂದ ಈಗಾಗಲೇ ಗುರುತಿಸಿ ಸುರಕ್ಷಾ ಯೋಜನೆಯಡಿ ಪರಿಹಾರ ಪಡೆದುಕೊಂಡಿರುವವರಿಗೆ. |
| 9. | ಎಂಡೋಸಲ್ಫಾ ಸಂತ್ರಸ್ಥರಿಗೆ ಮಿತವೇತನ<br>ಶೇ.25 ರಿಂದ 50 ಅಂಗವಿಕಲತೆ ಹೊಂದಿರುವವರು<br>ಶೇ. 60 ಕ್ಕಿಂತ | ಉಡುಪಿ, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿನ ಎಂಡೋಸಲ್ಫಾನ್ ಸಂತ್ರಸ್ಥರಿಗೆ ಆರ್ಥಿಕ ಸಹಾಯ ಒದಗಿಸುವುದು. | • ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಗುರುತಿಸಿರುವ ಫಲಾನುಭವಿಗಳು<br>• ಅಂಗವಿಕಲತೆ ಪ್ರಮಾಣ ಶೇ.25 |

| | | | |
|---|---|---|---|
| | ಹೆಚ್ಚಿನಅಂಗವಿಕಲತೆ ಹೊಂದಿರುವವರು | | ಕ್ಕಿಂತ ಹೆಚ್ಚಿರಬೇಕು |

## ಅನುಬಂಧ-2

### ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯದಡಿ ಜಾರಿಯಲ್ಲಿರುವ ಯೋಜನೆಗಳ ವಿವರ

| ಕ್ರಸಂ | ಯೋಜನೆ | ಪಿಂಚಣಿಮೊತ್ತ [ರೂ.ಗಳಲ್ಲಿ] |
|---|---|---|
| 1 | ವೃದ್ದಾಪ್ಯ ವೇತನ : | |
| | 60 ರಿಂದ 64 ವರ್ಷದೊಳಗಿನವರಿಗೆ | 600/- |
| | 65 ವರ್ಷ ಮೇಲ್ಪಟ್ಟವರಿಗೆ | 1,200/- |
| 2 | ವಿಧವಾ ವೇತನ | 800/- |
| 3 | ಅಂಗವಿಕಲ ವೇತನ : | |
| | ಶೇಕಡ 40% ರಷ್ಟು ಅಂಗವಿಕಲತೆಯುಳ್ಳವರಿಗೆ | 800/- |
| | ಶೇಕಡ 75%ಕ್ಕಿಂತ ಹೆಚ್ಚು ಅಂಗವಿಕಲತೆಯುಳ್ಳವರಿಗ | 1,400/- |
| | ಶೇಕಡ 75%ಕ್ಕಿಂತ ಹೆಚ್ಚು ಮನೋವೈಕಲ್ಯತ ಹೊಂದಿರುವವರು | 2,000/- |
| 4 | ಸಂಧ್ಯಾಸುರಕ್ಷಾ ವೇತನ | 1,200/- |
| 5 | ಮನಸ್ವಿನಿ ಯೋಜನೆ | 800/- |
| 6 | ಮೈತ್ರಿ ಯೋಜನೆ | 800/- |
| 7 | ಸಾಲಭಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತಪತ್ನಿಯರಿಗೆ ವಿಧವಾ ಮಾಸಾಶನ | 2,000/- |
| 8 | ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ಸಹಾಯಧನ | 10,000/- |
| 9 | ಎಂಡೋಸಲ್ಫಾನ ಸಂತ್ರಸ್ಥರಿಗೆ ಮಿತ ವೇತನ | |
| | ಶೇಕಡ 25% ರಿಂದ 59% ಅಂಗವಿಕಲತೆ ಹೊಂದಿರುವವರು | 2,000/- |
| | ಶೇಕಡ 60%ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವವರು | 4,000/- |

### 2022-23ನೇ ಸಾಲಿನಲ್ಲಿ ವಿವಿಧ ಇಲಾಖೆಗಳಿಂದ ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯಕ್ಕೆ ವರ್ಗಾವಣೆಗೊಂಡಿರುವ ಯೋಜನೆಗಳ ವಿವರ

| ಕ್ರಸಂ | ಯೋಜನೆ | ಇಲಾಖೆಯಿಂದವರ್ಗಾವಣೆಯಾದಆದೇಶ | ಪಿಂಚಣಿಮೊತ್ತ (ಮಾ |
|---|---|---|---|

| | | | |
|---|---|---|---|
| | | ಮತ್ತು ದಿನಾಂಕ | ಹೆಯಾಸ) |
| 1 | ಮಾಜಿ ದೇವದಾಸಿಯರಿಗೆ ಮಾಸಿಕ ಪಿಂಚಣಿ ಯೋಜನೆ | ಆದೇಶ ಸಂಖ್ಯೆ: ಮಮಇ/53/ಮಅನಿ/2022 ದಿನಾಂಕ: 08/08/2022ರಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಕಂದಾಯ ಇಲಾಖೆಗೆ ವರ್ಗಾವಣೆಗೊಂಡಿರುತ್ತದೆ | ರೂ.1500/- |
| 2 | ರಾಜ್ಯ ಸ್ವಾತಂತ್ರ್ಯ ಹೋರಾಟಗಾರರ ಗೌರವಧನ/ ಕುಟುಂಬ ಪಿಂಚಣಿ | ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ(ಆಸು)/37/ ಈಕಾಅ/2024 ದಿನಾಂಕ: 13/04/2022ರಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇ | ರೂ.10000/- |
| 3 | ಗೋವಾ ಸ್ವಾತಂತ್ರ್ಯ ಹೋರಾಟಗಾರರ ಗೌರವಧನ/ ಕುಟುಂಬ ಪಿಂಚಣಿ | ಲಾಖೆಯ ರಾಜಕೀಯ ವಿಶ್ರಾಂತಿ ವೇತನ ಶಾಖೆಯಿಂದ ಕಂದಾಯ ಇಲಾಖೆಗೆ ವರ್ಗಾವಣೆಗೊಂಡಿರುತ್ತದೆ | ರೂ.9000/- |